

ಕನ್ನಡದಲ್ಲಿ ಎಂಎ, ಪೊಲಿಟಿಕಲ್ ಸೈನ್ಸ್ ಎಂಎ, ಸೈಕಾಲಜಿ ಎಂಎ, ಸೋಷಿಯಾಲಜಿ ಎಂಎ, ಹಿಂದಿ ಎಂಎ, ಇಂಗ್ಲಿಷ್ ಎಂಎ, ಇತಿಹಾಸ ಎಂಎ, ಸಂಸ್ಕೃತ ಎಂಎ, ಅರ್ಥಶಾಸ್ತ್ರದ ಎಂಎ– ಹೀಗೆ ಹಲವಾರು ಎಮ್ಮೆಗಳನ್ನು ತಮ್ಮ ಮನೆಯಲ್ಲಿ ಕಟ್ಟಿದ್ದರು. ಇವರಿಗೆ ನೋಟ್ಸ್‌ಗಳನ್ನು ಮನೆಗೆ ತಲುಪಿಸುವುದರಲ್ಲೇ ಪೋಸ್ಟ್‌ಮ್ಯಾನ್ ಮಾದಪ್ಪ ನಿವೃತ್ತಿ ಅಂಚಿಗೆ ತಲುಪಿದ್ದರು. ಇಷ್ಟೆಲ್ಲ ಎಮ್ಮೆ ಕಟ್ಟಿದ್ದರೂ ತ್ಯಾಂಪಣ್ಣಗೆ ಕೆಲಸ ಮಾತ್ರ ಸಿಕ್ಕಿಲ್ಲ.

ಯಾವುದೋ ಒಂದು ಶಾಲೆಯಲ್ಲಿ ಸಂದರ್ಶನ ಮುಗಿಸಿ ಮನೆಗೆ ಬರುವಾಗ ದಾರಿಯಲ್ಲಿ ಸಂಕ ಮುರಿದು ನೀರು ತುಂಬಿ ಹರಿಯುತ್ತಿತ್ತು. ಬೇರೆ ದಾರಿ ಇಲ್ಲದೆ ಪ್ಯಾಂಟ್ ಒದ್ದೆ ಮಾಡಿಕೊಂಡು, ಫೈಲ್ ತಲೆ ಮೇಲೆ ಹೊತ್ತುಕೊಂಡು ತ್ಯಾಂಪಣ್ಣ ಹೊಳೆ ದಾಟಿದರು. ಗದ್ದೆಯ ಅಂಚಿನಲ್ಲಿ ನಡೆದು ಬರುವಾಗ ಬರೇ ಶಿಕ್ಷಣವನ್ನು ಅಂಚೆ ಮೂಲಕ ನೀಡಲಾಗುತ್ತಿದೆ. ನಾನ್ಯಾಕೆ ಯಾವುದಾದರೂ ಕ್ರೀಡೆಯನ್ನು ಅಂಚೆ ಮೂಲಕ ಕಲಿಸಿ ಸಂಪಾದನೆ ಮಾಡಬಾರದು ಎಂದು ಯೋಚಿಸಿದರು.

ಅಂಚೆ ತೆರಪಿನ ಶಿಕ್ಷಣದಲ್ಲಿ ಹಲವಾರು ಪದವಿಗಳನ್ನು ಹೊಂದಿರುವ ತ್ಯಾಂಪಣ್ಣಗೆ ಕ್ರೀಡೆಯಲ್ಲಿ ಏನಾದರೂ ಸಾಧನೆ ಮಾಡಬೇಕೆಂಬ ಹಂಬಲ. ಆದರೆ ಅದನ್ನೂ ಅಂಚೆ ಮೂಲಕ ಕಲಿತು ಸಮಾಜಕ್ಕೆ ಅಂಚೆ ತೆರಪಿನ ಶಿಕ್ಷಣದ ಮಹತ್ವ ಸಾರಬೇಕೆಂಬ ಛಲ. ಕ್ರಿಕೆಟ್? ಛೆ ಕ್ರಿಕೆಟ್ ಜನಪ್ರಿಯಗೊಂಡ ಕ್ರೀಡೆ. ಹೇಗೂ ನೋಡಿ ಕಲಿಯಬಹುದು, ಯಾರೋ ಚೆಂಡು ಎಸೆಯುತ್ತಾರೆ, ಅದನ್ನು ಬಲವಾಗಿ ಹೊಡೆದರಾಯಿತು. ಆದ್ದರಿಂದ ಕ್ರಿಕೆಟ್ ಬೇಡ ಅನಿಸಿತು. ಬಾಕ್ಸಿಂಗ್ ಮಾಡೋಣವೆಂದರೆ ಎದುರಿಗೆ ಯಾರಾದರೂ ಇರಬೇಕಾಗುತ್ತದೆ, ಹಾಗೆ ಬೇರೆಯವರನ್ನು ಎದುರಿಗೆ ಇರಿಸಿಕೊಂಡು ಕಲಿತರೆ ಅವರೂ ಕಲಿತು ನನ್ನ ವಿದ್ವತ್ತಿಗೆ ಅಡ್ಡಿಯಾಗುತ್ತದೆ ಎಂದು ಬಾಕ್ಸಿಂಗ್ ಕೂಡ ಕೈಬಿಟ್ಟರು. ಕಬಡ್ಡಿ? ಛೆ, ಒಬ್ರು ಇನ್ನೊಬ್ಬರ ಕಾಲು ಮಾತ್ರ ಎಳೆಯಬಹುದು, ಕಬಡ್ಡಿ ಆಡಲು ಮತ್ತೆ ಐದು ಜನ ಬೇಕು, ಎದುರಿಗೆ ಮತ್ತೊಂದು ತಂಡ ಬೇಕು ಅದೂ ಬೇಡ ಎಂದು ಯೋಚಿಸತೊಡಗಿದ ತ್ಯಾಂಪಣ್ಣ.

ಒಂದು ದಿನ ಹೊಳೆಯ ದಂಡೆಯ ಮೇಲೆ ಕುಳಿತಾಗ ನಾಯಿಯೊಂದು ಈಜಿಕೊಂಡು ಹೊಳೆ ದಾಟುತ್ತಿತ್ತು. ತ್ಯಾಂಪಣ್ಣಗೆ ಅಚ್ಚರಿಯಾಯಿತು. ಇರುವ ಎಲ್ಲ ವಿಷಯಗಳ ಬಗ್ಗೆ 'ಎಮ್ಮೆ' ಮಾಡಿದ ಹೆಮ್ಮೆ ಇದ್ದರೂ ಈ ಈಜು ನನಗೆ ಬರುತ್ತಿಲ್ಲವಲ್ಲ? ಈಜು ಬಾರದ ಪಂಡಿತ ಎನಿಸಿಕೊಳ್ಳಬಾರದು ಎಂದು, ಕಲಿಯುವುದಾದರೆ ಈಜನ್ನೇ ಕಲಿತು, ಇತರರಿಗೆ ಅದನ್ನು ಹೇಳಿಕೊಟ್ಟು ದ್ರೋಣಾಚಾರ್ಯ ಪ್ರಶಸ್ತಿ ಪಡೆಯಬೇಕೆಂಬ ಹಂಬಲ ಉಕ್ಕಿತು.

ಕರ್ನಾಟಕದಲ್ಲಿರುವ ಓಪನ್ ಯೂನಿವರ್ಸಿಟಿಗಳಲ್ಲಿ ಅಂಚೆ ಮೂಲಕ ಈಜು ಕಲಿತರೆ ಇದು ಕರ್ನಾಟಕದಲ್ಲಿ ಇತರರಿಗೂ ಗೊತ್ತಾಗಿ ಎಲ್ಲರೂ ಕಲಿಯಲಾರಂಭಿಸಿದರೆ ತನಗೆಲ್ಲಿಯ ಬೆಲೆ ಎಂದರಿತು, ಹೊರರಾಜ್ಯದ ವಿಶ್ವವಿದ್ಯಾನಿಲಯಕ್ಕೆ ಇಂಗ್ಲಿಷ್‌ನಲ್ಲಿ **'I want to learn eeju through correspondence'** ಎಂದು ಪತ್ರ ಬರೆದರು. ನಾಲ್ಕು ದಿನದಲ್ಲೇ ಪತ್ರ ವಾಪಸ್ ಬಂತು. ನೋಡಿದರೆ ತ್ಯಾಂಪಣ್ಣ ಈಜನ್ನು ಕಂಗ್ಲಿಷ್‌ನಲ್ಲಿ ಬರೆದು ತಪ್ಪು ಮಾಡಿದ್ದರು, ಪುನಃ **'I want to learn swimming through Correspondence course, please help'** ಎಂದು ಬರೆದು ಅಂಚೆ ಪೆಟ್ಟಿಗೆಗೆ ಹಾಕಿದರು. ತಮ್ಮಾಮಲ್ಲೆ ವಿಶ್ವವಿದ್ಯಾನಿಲಯದ ಗುಮಾಸ್ತ ಇದನ್ನು ಓದಿ ನಗಲಾರಂಭಿಸಿದ. ಅಲ್ಲಿದ್ದ ಕರ್ನಾಟಕದ ಸಿಬ್ಬಂದಿಗೆ 'ನೋಡು, ನಿಮ್ಮ ಕರ್ನಾಟಕದ ಪಂಡಿತರೊಬ್ಬರ ಆಶಯ' ಎಂದು ತೋರಿಸಿ ನಕ್ಕ. ಅಲ್ಲಿದ್ದ ಕರ್ನಾಟಕದ ಸಿಬ್ಬಂದಿ ತ್ಯಾಂಪಣ್ಣಗೆ ತಮಾಷೆ ಮಾಡಬೇಕೆಂದು, 'ನಿಮಗೆ ಉಚಿತವಾಗಿ ಅಂಚೆ ಮೂಲಕ ಈಜು ಕಲಿಸಲಾಗುವುದು' ಎಂದು ಕನ್ನಡದಲ್ಲೇ ಪತ್ರ ಬರೆದ. 'ನಾವು ಹೇಳಿದಂತೆ ಅಭ್ಯಾಸ ಮಾಡಿ. ನೀವು ಈಜುಗಾರರಾಗುತ್ತೀರಿ' ಎಂದು ಖಾಸಗಿಯಾಗಿಯೇ ಪತ್ರ ಬರೆದ.

ಹಲವು ದಿನಗಳ ಬಳಿಕ ಬಿಡುವು ಮಾಡಿಕೊಂಡ ತಮ್ಮಾಮಲ್ಲೆ ವಿಶ್ವವಿದ್ಯಾನಿಲಯದ ಕನ್ನಡಿಗ ಈಜು ಕಲಿಯುವ ಮೊದಲ ಹಂತದ ಮಾಹಿತಿಯನ್ನು ಕಳುಹಿಸಿದರು. ಅದು ಹೀಗಿತ್ತು:

1. ಮೊದಲು ಬಟ್ಟೆಯನ್ನು ಕಳಚಿ ಬದಿಗಿಡಿ, ಚಡ್ಡಿ ಇದ್ದರೆ ಉತ್ತಮ.
2. ಮನೆಯ ಹಾಲ್‌ನಲ್ಲೇ ಅಭ್ಯಾಸ ಆರಂಭಿಸಿ, ಯಾರೂ ಇಲ್ಲದಿದ್ದರೆ ಉತ್ತಮ.
3. ಈಜುಕೊಳಕ್ಕೆ ಜಿಗಿಯುವಾಗ ದಂಡೆಯಿಂದ ಜಿಗಿಯುವ ಅಭ್ಯಾಸವಾಗಬೇಕು, ಅದಕ್ಕಾಗಿ ಮನೆಯಲ್ಲಿ ಯಾವುದಾದರೂ ಎತ್ತರದ (ಉದಾಹರಣೆಗೆ ಸೋಫಾ) ವಸ್ತುವಿನ ಮೇಲೆ ನಿಂತು ಜಿಗಿಯಿರಿ.
4. ಕಾಲುಗಳನ್ನು ಬಡಿಯುವುದು, ಕೈಗಳನ್ನು ಮುಂದಕ್ಕೆ ಹಾಕಿ ನೀರು ಇದೆ ಎಂದು ತಿಳಿದು ಹಿಂದಕ್ಕೆ ತಳ್ಳುವುದು.
5. ಮೂಗಿಗೆ ನೀರು ಹೋಗದಂತೆ ಎಚ್ಚರವಹಿಸುವ ಸಲುವಾಗಿ ಉಸಿರನ್ನು ಬಿಗಿಹಿಡಿದುಕೊಳ್ಳಿ.

ಹೀಗೆ ಒಂದೆರಡು ವಾರಗಳ ನಂತರ ಮನೆಯ ಪಕ್ಕದಲ್ಲಿರುವ ಕೆರೆ ಅಥವಾ ಹೊಳೆಯ ದಡದಲ್ಲಿ ಅಭ್ಯಾಸ ಆರಂಭಿಸಿ. ಹೆಚ್ಚಿನ ಮಾಹಿತಿ ಎರಡನೇ ಕಂತಿನಲ್ಲಿ... ಎಂದು ಪತ್ರ ಕೊನೆಗೊಂಡಿತ್ತು.

ಸಲಹೆಗಳನ್ನು ಓದಿದ ತ್ಯಾಂಪಣ್ಣನ ಮೊಗದಲ್ಲಿ ನಿರ್ಲಕ್ಷ್ಯದ ಭಾವ. ಎಂಥೆಂಥಾ ಎಂಎ ಮಾಡಿದ್ದೇನೆ, ಇದೇನ್ ಮಹಾ ಎಂದು ಅಭ್ಯಾಸ ಆರಂಭಿಸಿದ. ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ನೋಡಿ ಬರೇ ಚಡ್ಡಿಯಲ್ಲಿ ಸೋಫಾದ ಮೇಲಿಂದ ನೆಲಕ್ಕೆ ಹಾರುವುದು ಮತ್ತು ತೆವಳುವುದು, ಉಸಿರು ಬಿಗಿ ಹಿಡಿದು ತೆವಳುವುದು, ಹೀಗೆಲ್ಲ ಕಸರತ್ತು ಮಾಡುತ್ತಿದ್ದ. ಈ ನಡುವೆ 'ಎರಡನೇ ಕಂತು ಬಂದಿಲ್ಲ... ಹೇಗೂ ಕಲಿತಾಯಿತು. ಎಲ್ಲ ವಿಷಯಗಳೂ ಬರುತ್ತಿದೆ, ಇನ್ನೇನು ತಡ' ಎಂದ ತ್ಯಾಂಪಣ್ಣ ಪಕ್ಕದ ಹೊಳೆಯಲ್ಲಿಳಿಯಲು ತೀರ್ಮಾನಿಸಿದ.

ಒಂದು ಭಾನುವಾರ ನಡು ಮಧ್ಯಾಹ್ನ ಹೊಳೆಯ ಬದಿಗೆ ಹೋಗಿ, ಬಟ್ಟೆ ಕಳಚಿ, ಧೈರ್ಯಕ್ಕೆ ಅಂಚೆ ಮೂಲಕ ಬಂದ ಮಾಹಿತಿಯನ್ನು ಉಡುದಾರಕ್ಕೆ ಸಿಕ್ಕಿಸಿಕೊಂಡ. ಸೋಫಾದ ಮೇಲೆ ಹತ್ತಿ ನೆಲಕ್ಕೆ ಹಾರಿದಂತೆ, ಮೂಗನ್ನು ಕೈಯಿಂದ ಒತ್ತಿ ಹಿಡಿದು ಹೊಳೆಗೆ ಹಾರಿದ. ಅತ್ಯಂತ ಉತ್ಸಾಹದಲ್ಲಿ ಹಾರಿದ ತ್ಯಾಂಪಣ್ಣ ನಿರೀಕ್ಷಿಸಿದ ಮಟ್ಟಕ್ಕಿಂತ ಮುಂದೆ ಹೋಗಿದ್ದ. ಕಾಲು ಬಡಿದರೆ ನೆಲ ಸಿಗದು, ಉಡುದಾರದಲ್ಲಿ ಸಿಕ್ಕಿಸಿಕೊಂಡಿದ್ದ ಚೀಟಿ ತೆಗೆಯಲು ಹೋಗಿ ಮೂಗಿನಿಂದ ಕೈ ತೆಗೆದ. ದೇಹ ಒಮ್ಮೆ ನೀರೊಳಗೆ, ಇನ್ನೊಮ್ಮೆ ಮೇಲಕ್ಕೆ ಬರುತ್ತಿತ್ತು. 'ಕಾಪಾಡಿ... ಕಾಪಾಡಿ' ಎಂಬ ಧ್ವನಿ ದನ ಕಾಯುತ್ತಿದ್ದ ಹುಡುಗರ ಕಿವಿಗೆ ಬಿತ್ತು. ಎಲ್ಲರೂ ಓಡಿ ಬಂದು ಹಗ್ಗ ನೀಡಿ ತ್ಯಾಂಪಣ್ಣನನ್ನು ಮೇಲಕ್ಕೆ ಎಳೆದರು.

**ಪ್ರತಿಕ್ರಿಯಿಸಿ: feedback@sudha.co.in**